# ಸಾಪ್ತಾಹಿಕ ಸಂಪದ

ಉದಯವಾಣಿ ಸೆಪ್ಟೆಂಬರ್ 19, 2010

ಯಾರನ್ನಾದರೂ ಪ್ರೀತಿಸುವ ಮುನ್ನ ಅವನ ವ್ಯಕ್ತಿತ್ವವನ್ನು ಅಳೆಯಲು ಪ್ರಯತ್ನಿಸಬೇಡಿ. ಹಾಗೆ ಮಾಡಿದರೆ, ಅಳೆಯುವುದರಲ್ಲಿಯೇ ಬಹು ಸಮಯ ವ್ಯಯವಾಗಿ, ಪ್ರೀತಿಸಲು ಸಾಧ್ಯವೇ ಆಗುವುದಿಲ್ಲ.

# ಒಂದು ಹೊಸ ಚಿಂತನೆಯ ಕುರಿತಾಗಿ...

**ಎಸ್. ಎನ್. ಬಾಲಗಂಗಾಧರ ಅವರ *ದ ಹೀದನ್ ಇನ್ ಹಿಸ್ ಬ್ಲೈಂಡ್‌ನೆಸ್* ಕೃತಿಯನ್ನು ರಾಜಾರಾಮ ಹೆಗಡೆ ಅವರು *ಸ್ಮೃತಿ- ವಿಸ್ಮೃತಿ: ಭಾರತೀಯ ಸಂಸ್ಕೃತಿ*ಯಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಹೆಗ್ಗೋಡಿನ ಅಕ್ಷರ ಪ್ರಕಾಶನ ಈ ಪುಸ್ತಕವನ್ನು ಪ್ರಕಟಿಸಿದೆ. ಭಾರತೀಯ ಸಂಸ್ಕೃತಿಯ ಬಗ್ಗೆ ವಿಭಿನ್ನ ರೀತಿಯಲ್ಲಿ ವಿಶ್ಲೇಷಿಸುವ ಪ್ರಯತ್ನ ಈ ಕೃತಿಯಲ್ಲಿ ನಡೆದಿದೆ. ಬಾಲಗಂಗಾಧರ ಅವರ ಪ್ರತಿಪಾದನೆಗಳ ಬಗ್ಗೆ ಈಗ ಎಲ್ಲೆಡೆ ವ್ಯಾಪಕ ಚರ್ಚೆಗಳಾಗುತ್ತಿವೆ.**
**ಸಂಪ್ರದಾಯವಾದಿಗಳು ಮತ್ತು ಪ್ರಗತಿಶೀಲರಲ್ಲಿ ಈ ಬಗ್ಗೆ ವಿಭಿನ್ನವಾದ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ...**





ಎಸ್. ಎನ್. ಬಾಲಗಂಗಾಧರ

ಬೆಲ್ಜಿಯಂನ ಘೆಂಟ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಎಸ್. ಎನ್. ಬಾಲಗಂಗಾಧರ ಅವರ ಬಹು ಚರ್ಚೆಗೊಳಪಡುತ್ತಿರುವ *ದ ಹೀದನ್ ಇನ್ ಹಿಸ್ ಬ್ಲೈಂಡ್‌ನೆಸ್* ಕೃತಿಯ ಕನ್ನಡ ಅನುವಾದವೇ *ಸ್ಮೃತಿ-ವಿಸ್ಮೃತಿ ಭಾರತೀಯ ಸಂಸ್ಕೃತಿ*. ಹಲವು ಕಾರಣಗಳಿಂದ ಮುಖ್ಯವಾಗುವ ಈ ಕೃತಿಯ ಸಂಕ್ಷಿಪ್ತ ಪರಿಚಯ ಮಾಡಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

'ರಿಲಿಜನ್' ಎಂಬುದು 'ಸಾಂಸ್ಕೃತಿಕ ಸಾರ್ವತ್ರಿಕವಾದುದು' ಎಂಬುದನ್ನು ಪ್ರಶ್ನಿಸುವ ಜೊತೆಗೆ, ರಿಲಿಜನ್ ಎಲ್ಲ ಸಂಸ್ಕೃತಿಗಳಲ್ಲಿ ಇದೆಯೆಂದು ಅಥವಾ ಇರಬೇಕೆಂದು ಗುರ್ತಿಸುವ ಪ್ರವೃತ್ತಿಯ ಬೆಳವಣಿಗೆಯನ್ನು ವಿವರಿಸುವ ಮೊತ್ತಮೊದಲ ಚಿಂತಕರೆನಿಸಿದ್ದಾರೆ, ಎಸ್. ಎನ್. ಬಾಲಗಂಗಾಧರರವರು.

ಎರಡು ಸಾವಿರ ವರ್ಷಗಳ ಪಶ್ಚಿಮದ ಬೆಳವಣಿಗೆಯನ್ನು ತರ್ಕಬದ್ಧವಾಗಿ ಕ್ರಿಶ್ಚಿಯನ್ ಥಿಯಾಲಜಿಯಿಂದಲೇ ವಿವರಿಸುವ ನಿಟ್ಟಿನಲ್ಲಿ ಎಸ್. ಎನ್. ಬಾಲಗಂಗಾಧರ ಅವರು ಮೊದಲಿಗರೆನಿಸುತ್ತಾರೆ. ಅಂದರೆ, ಪಾಶ್ಚಾತ್ಯ ಚಿಂತನೆ ಅಥವಾ ಕಲ್ಪನೆಯನ್ನು ಕ್ರಿಶ್ಚಿಯನ್ ಥಿಯಾಲಜಿ ಬಿಟ್ಟು ಅರ್ಥಮಾಡಿಕೊಳ್ಳಲಾಗುವುದಿಲ್ಲ ಎನ್ನುವ ಬಾಲಗಂಗಾಧರ ಅವರು ಕ್ರಿಶ್ಚಿಯನ್ ಹುಟ್ಟು, ವಿಸ್ತಾರ, ಬೆಳವಣಿಗೆಯನ್ನು ಸೂಕ್ಷ್ಮವಾಗಿ ನೋಡುತ್ತಾರೆ.

ಅವರ ಪ್ರಕಾರ, ರೋಮ್‌ನಲ್ಲಿ ಪ್ರಾರಂಭದಲ್ಲಿದ್ದ ನೂರಾರು ಆಚರಣೆಗಳನ್ನು ವಿರೋಧಿಸುತ್ತಾ ಕ್ರಿಶ್ಚಿಯಾನಿಟಿಯು ತನ್ನದೇ ಆದ ಥಿಯಾಲಜಿಯನ್ನು ಕಟ್ಟಿಕೊಳ್ಳುವ ಪ್ರಯತ್ನದಲ್ಲಿ ಸಾಗಿ, "ಮನುಕುಲದ ಒಳಿತಿಗಾಗಿ ದೇವರಿಂದಲೇ ನಿರೂಪಿತವಾದದ್ದೇ ನಿಜವಾದ ರಿಲಿಜನ್" ಎಂದು ತನ್ನನ್ನು ಸ್ಥಾಪಿಸಿಕೊಂಡು, ರೋಮನ್ನರು ಆಚರಿಸುತ್ತಿದ್ದ ಆಚರಣೆ ಮತ್ತು ಅದರ ಹಿಂದಿನ ನಂಬಿಕೆ ಎಲ್ಲವನ್ನು ಸುಳ್ಳು ಎನ್ನುವ ಮೂಲಕ ಅದನ್ನು ಸುಳ್ಳಾದ 'ಅನ್ಯ ರಿಲಿಜನ್' ಆಗಿ ಮಾಡಿತು.

ಹೀಗೆ ಪ್ರಾರಂಭವಾದ ಕ್ರಿಶ್ಚಿಯಾನಿಟಿಯು ಚರ್ಚಿನ ಒಳಗೇ ಆದ ಸುಧಾರಣಾ ಚಳುವಳಿಯಿಂದಾಗಿ (*Reformation*) ಮತ್ತಷ್ಟು ತನ್ನನ್ನು ವಿಸ್ತರಿಸಿಕೊಳ್ಳುತ್ತದೆ. ಇದನ್ನು ಪ್ರೊಟೆಸ್ಟೆಂಟ್ ಕ್ರಾಂತಿಯೆಂದು ಕರೆದುಕೊಳ್ಳುತ್ತದೆ. ಈ ಅವಧಿಯಲ್ಲಿ ಕ್ಯಾಥೋಲಿಕ್ ಚರ್ಚ್‌ನ ಪೌರೋಹಿತ್ಯರಿಂದ (ಪಾದ್ರಿಗಳಿಂದ) ಕ್ರಿಶ್ಚಿಯನ್ ಥಿಯಾಲಜಿಯಲ್ಲಿ ಸೇರ್ಪಡೆಯಾಗಿದ್ದ ಪೇಗನ್ ಆಚರಣೆಗಳನ್ನು ತೆಗೆದುಹಾಕಿ, ರಿಲಿಜನ್ ಅನ್ನು ಪೌರೋಹಿತ್ಯ ಹಿಡಿತದಿಂದ ಮುಕ್ತಗೊಳಿಸಲಾಯಿತು.

ಇದಾದ 400 ವರ್ಷಗಳ ಅನಂತರದಲ್ಲಿ ಉಂಟಾದ

ಏಳನೇ ಪುಟಕ್ಕೆ

ಪ್ರೊ. ಜಿ. ಶಿವರಾಮಕೃಷ್ಣನ್
ಲೇಖಕರು ಬೆಂಗಳೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರದ ವಿಭಾಗದ ಮುಖ್ಯಸ್ಥರಾಗಿ ಈಗ ನಿವೃತ್ತರು.

ನಮ್ಮ ಜೀವನವನ್ನು ಒಂದು ತೆರೆದ ಪುಸ್ತಕವಾಗಿ ಭಾವಿಸಿದರೆ ಎಷ್ಟು ಚೆನ್ನ! ಎಲ್ಲರೂ ಎರಡೆರಡು ಸಾಲು ಕವನಗಳು ಅದರಲ್ಲಿ ಬರೆದಿರಲಿ...

# ಒಂದು ಹೊಸ ಚಿಂತನೆಯ ಕುರಿತಾಗಿ...

-ಮೊದಲನೇ ಪುಟದಿಂದ

ಜ್ಞಾನೋದಯ (*Enlightenment*), ವೈಚಾರಿಕ ಕ್ರಾಂತಿ ಎಂದು ಕರೆಯಲ್ಪಡುವ ಅವಧಿಯಲ್ಲಿ ಕ್ರಿಶ್ಚಿಯಾನಿಟಿಯು ತನ್ನತನವನ್ನು ಕಳೆದುಕೊಳ್ಳುವುದರ ಮೂಲಕ ರಿಲಿಜನ್‌ನ ಪ್ರಭಾವ ಅನಂತರದಲ್ಲಿ ಎಲ್ಲ ಬೆಳವಣಿಗೆಗಳಲ್ಲಿ ಕಡಿಮೆಯಾಯಿತು ಎಂದು ನಾವು ಅಂದುಕೊಂಡಿದ್ದೇವೆ.

ಆದರೆ ಕ್ರಿಶ್ಚಿಯಾನಿಟಿಯು ಸ್ವಲ್ಪ ಮಟ್ಟಿಗೆ ತನ್ನ ತನವನ್ನು ಕಳೆದುಕೊಂಡರೂ ಅನಂತರದ ಅವಧಿಯಲ್ಲಿ ಅದರ ಥಿಯಾಲಜಿಯನ್ನು ಥಿಯಾಲಜಿಯಾಗಿಯೇ ಹರಡದೆ, ರಿಲಿಜಿನ್ ತನ್ನ ವೇಷವನ್ನು ಕಳಚಿ ಸೆಕ್ಯುಲರ್ (*Secular*) ರೂಪ ಪಡೆಯುತ್ತದೆ. ಇದರಿಂದ ಕ್ರಿಶ್ಚಿಯಾನಿಟಿಯು ಇನ್ನಷ್ಟು ವೇಗವಾಗಿ ಶೀಘ್ರಗತಿಯಲ್ಲಿ ವಿಸ್ತಾರವಾಗಲು ಕಾರಣವಾಗುತ್ತದೆ ಎನ್ನುವ ವೈರುಧ್ಯವನ್ನು ಬಾಲಗಂಗಾಧರ ಅವರು ತಿಳಿಸುತ್ತಾರೆ. ಮತ್ತು ಇಂದಿನ ಸಮಾಜ ಶಾಸ್ತ್ರ, ತತ್ವಶಾಸ್ತ್ರ, ವಿಜ್ಞಾನ, ಇತಿಹಾಸ, ಕಾನೂನು ಇತ್ಯಾದಿ ಎಲ್ಲವೂ ಸೆಕ್ಯುಲರ್ ರೂಪದಿಂದಲೇ ಹುಟ್ಟಿದವುಗಳಾದ್ದರಿಂದ ನಾವೆಲ್ಲರು ಇಂದು ಗೊತ್ತಿದ್ದೂ ಗೊತ್ತಿಲ್ಲದೆಯೇ ಕ್ರಿಶ್ಚಿಯನ್‌ರಾಗಿದ್ದೇವೆ ಎನ್ನುತ್ತಾರೆ.

ಈ ಹಿನ್ನೆಲೆಯಲ್ಲಿ 16ನೇ ಶತಮಾನದಲ್ಲಿ ಭಾರತಕ್ಕೆ ಬಂದಂತಹ ಕ್ರೈಸ್ತ ಪೌರೋಹಿತ್ಯರಿಗೆ ಇಲ್ಲಿನ ಆಚರಣೆಗಳು, ಕ್ರಿಶ್ಚಿಯನಿಟಿಯು ಪ್ರಾರಂಭದಲ್ಲಿ ರೋಂನಲ್ಲಿ ಕಂಡ ಆಚರಣೆಗಳಂತೆಯೇ ಇದೆಯೆಂದು ಭಾವಿಸುತ್ತಾರೆ. ಮತ್ತು ಇಲ್ಲಿನ ಆಚರಣೆಗಳನ್ನು ಬಹಳ ನಿಷ್ಠುರವಾಗಿ ನೋಡುತ್ತಾರೆ, ಇಲ್ಲಿನವರನ್ನು ಹೀದನ್‌ಗಳೆದು ಕರೆದು ಅಜ್ಞಾನದಲ್ಲಿರುವ ಭಾರತೀಯರನ್ನು ಜ್ಞಾನ ಮಾರ್ಗದೆಡೆಗೆ ಕೊಂಡೊಯ್ಯಬೇಕೆಂದು ರಿಲಿಜನ್ ಪ್ರಚಾರ ಕೈಗೊಳ್ಳುತ್ತಾರೆ.

ಈ ಸಮಯದಲ್ಲಿ ಇಲ್ಲಿನ ಆಚರಣೆಗಳು ಮತ್ತು ಅವುಗಳು ಹಿಂದಿನ ನಂಬಿಕೆಗಳಿಗೆ ಇರುವ ಶಾಸ್ತ್ರೀಯ ಸಮ್ಮತಿ (*Sanction*) ಅಥವಾ ಶಾಸ್ತ್ರೀಯ ಗ್ರಂಥಗಳನ್ನು ಹುಡುಕುತ್ತಾರೆ. ಯಾವುದೇ ಆಚರಣೆಗಳ ಹಿಂದೆ ಶಾಸ್ತ್ರೀಯ ಗ್ರಂಥಗಳಿರಬೇಕೆಂದು ಥಿಯಾಲಜಿಯಿಂದ ಅವರಿಗೆ ತಿಳಿದಿರುವುದಾಗಿದೆ. ಈ ಹುಡುಕಾಟದಲ್ಲಿ ಅವರಿಗೆ ಕಂಡದ್ದು ಇಲ್ಲಿನ ವೇದ, ಪುರಾಣ, ಮನು ಧರ್ಮಶಾಸ್ತ್ರ, ಪುರುಷಸೂಕ್ತ ಇತ್ಯಾದಿಗಳೆಲ್ಲವು. ಇಲ್ಲಿನ ಆಚರಣೆಗಳಿಗೆ ಯಾವುದೇ ಒಂದು ಗ್ರಂಥದ ಆಧಾರವಿಲ್ಲದ್ದನ್ನು ಕಂಡು ಗೊಂದಲಕ್ಕೊಳಗಾದರೂ ಇವೆಲ್ಲವನ್ನು ಪವಿತ್ರ ಗ್ರಂಥಗಳೆಂದೇ ಪರಿಗಣಿಸಿ. ಇವುಗಳ ರಚನೆಯು ಬ್ರಾಹ್ಮಣರಿಂದ ಉಂಟಾಗಿದೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಹೀಗೆ ಕ್ರಿಶ್ಚಿಯನ್ನರಿಗೆ ರೋಂನಲ್ಲಿದ್ದ ಪೌರೋಹಿತ್ಯನಂತೆಯೇ ಇಲ್ಲಿನ ಬ್ರಾಹ್ಮಣ ಕಾಣುತ್ತಾನೆ.

ಹೀಗೆ ಈ ಎಲ್ಲ ಅಂಶಗಳಿಂದ ಇಲ್ಲಿಯ ಒಂದು ರಿಲಿಜಿನ್ ಇರಬೇಕೆಂದು ಅಂದುಕೊಂಡು ಇಲ್ಲಿನ ಆಚರಣೆಗಳನ್ನು ರಿಲಿಜನ್‌ನ ಚೌಕಟ್ಟಿನಲ್ಲಿಟ್ಟು ಅದಕ್ಕೆ ಹಿಂದು ರಿಲಿಜನ್ ಎಂದು ಹೆಸರಿಡುತ್ತಾರೆ. ಅದರಿಂದ ಬಾಲಗಂಗಾಧರರ ಪ್ರಕಾರ, ಭಾರತವು ಆಚರಣೆ ಆಧಾರಿತವಾದ ಸಂಸ್ಕೃತಿಯಾಗಿದೆ ಪಶ್ಚಿಮವು ರಿಲಿಜಿನ್ ಆಧಾರಿತ ಸಂಸ್ಕೃತಿಯಾಗಿದೆ.

ಇದರಲ್ಲಿ ವೈಶಿಷ್ಟ್ಯವೇನು? ಇದು ನಮ್ಮ ಸಮಕಾಲೀನ ಸಮಸ್ಯೆಗೆ ಯಾವ ರೀತಿ ಪರಿಹಾರ ಒದಗಿಸಬಹುದೆಂಬ ಪ್ರಶ್ನೆ ಮೂಡಬಹುದು.

ಬಾಲಗಂಗಾಧರವರ ಕೃತಿಯ ತರ್ಕವನ್ನು ಮುಂದುವರಿಸಿ ಜಾತಿ ಸಮಸ್ಯೆಯನ್ನು ಉದಾಹರಣೆಯಾಗಿ ವಿವರಿಸಿರುವುದಾದರೆ, ಜಾತಿ ಆಚರಣೆಗಳ ಹಿಂದೆ ಸಿದ್ಧಾಂತವಿದೆ ಎಂದು ನೋಡುವುದು ಪಾಶ್ಚಾತ್ಯರಿಂದಲೇ ಮುಂದುವರಿಸಿರುವ ನಾವು ಜಾತಿ ಆಚರಣೆಗಳು ಸ್ಪಷ್ಟವಾಗಿ ಸೈದ್ಧಾಂತಿಕ ಹಿನ್ನಲೆಯಲ್ಲಿಯೇ ಅಥವಾ ಶಾಸ್ತ್ರೀಯ ಸಮ್ಮತಿಯಿಂದಲೇ (*Sanction*) ನಡೆಯುತ್ತಿವೆ ಎಂದು ತಿಳಿದಿದ್ದೇವೆ. ಆದರೆ ಇಂದಿನ ಜಾತಿಯ ಆಚರಣೆಗಳು ಸಿದ್ಧಾಂತವನ್ನು ತಿಳಿದು ಮುಂದುವರೆಯುತ್ತಿಲ್ಲ ಅಥವಾ ಆಚರಣೆಗಳ ಬದಲಾವಣೆಗೆ ಶಾಸ್ತ್ರೀಯ ಗ್ರಂಥದ ಸಮ್ಮತಿಯನ್ನು ಪಡೆದಿಲ್ಲ, ಅಂದರೆ, ಜಾತಿ ಆಚರಣೆಗಳು ಸನ್ನಿವೇಶಕ್ಕೆ ತಕ್ಕಹಾಗೆ ಬದಲಾಗಿದೆ. ಹೀಗಿರುವಾಗ ಜಾತಿಯನ್ನು ಹೋಗಲಾಡಿಸಲು 'ಸೈದ್ಧಾಂತಿಕ ಹೋರಾಟ' ಮಾಡುವುದರ ಬದಲು ಅದರ ಆಚರಣೆಗಳ ವಿರುದ್ಧದ ಹೋರಾಟದ ಅವಶ್ಯಕತೆಯನ್ನು ಈ ಕೃತಿಯು ತಿಳಿಸುತ್ತದೆ.

ಹೀಗೆ ಬಾಲಗಂಗಾಧರವರ ವಿವರಣೆಗಳು ನಮ್ಮ ಸಮಸ್ಯೆಗಳನ್ನು ಬೇರೆ ರೀತಿ ನೋಡಬಹುದು ಮತ್ತು ಅವುಗಳ ಪರಿಹಾರಕ್ಕೆ ಬೇರೆಯದೇ ರೀತಿಯಾದ ಉತ್ತರವನ್ನು ನೀಡುತ್ತದೆ ಎನ್ನಬಹುದಾಗಿದೆ.